ಏನೇನೊ ಮಾತುಗಳು, ಕೂಗು, ಬಿರುಸು ಮಾತುಗಳಿಂದ ವಾತಾವರಣ ಬಿಸಿಯಾಗಿತ್ತು. ನಾರಾಯಣರಾಯರು ಮಂಚದಲ್ಲಿ ಎದ್ದು ಕುಳಿತರು. ಗದ್ದಲಕ್ಕೇನು ಕಾರಣವೆಂದು ತಿಳಿಯಲು ಅವರು ಮಕ್ಕಳ ಗುಂಪಿನತ್ತ ನಡೆದರು. ಪುರುಷೋತ್ತಮರಾಯರ ಮೊಮ್ಮಗನ ಕೈಯಲ್ಲಿದ್ದ ಚಿನ್ನದ ಮೊಹರು ಕಳೆದು ಹೋಗಿತ್ತು. ಮಕ್ಕಳಲ್ಲಿ ಕಳವಳ, ಅಲ್ಲಿ ಇಲ್ಲಿ ಹುಡುಕತೊಡಗಿದರು. ನಾರಾಯಣರಾಯರ ಕೈ ತಾವು ತಂದ ಮೊಹರಿನತ್ತ ಹೋಯಿತು. ಅದು ಭದ್ರವಾಗಿತ್ತು.

ಮಕ್ಕಳ ಗದ್ದಲ ಕೇಳಿ ಸ್ವಲ್ಪ ಹೊತ್ತಿನಲ್ಲಿ ಮೂವರು ಕಾರಭಾರಿಗಳು ಓಡಿ ಬಂದರು. ಮೊಹರು ಕಳೆದು ಹೋದ ವಿಷಯ ತಿಳಿದು ಮನೆಯಜನ, ಕೆಲಸದವರು, ನೌಕರರು ಬಂದು ಮೊಹರು ಹುಡುಕತೊಡಗಿ ತಲೆಗೊಂದು ಮಾತಾಡತೊಡಗಿದರು. ಕೆಲವರು ತಮ್ಮಲ್ಲಿಯೇ ಗುಸುಗುಸು ಮಾತಾಡಿಕೊಳ್ಳುತ್ತ ರಾಯರತ್ತ ನೋಡುತ್ತಿದ್ದರು. ನಾರಾಯಣರಾಯರ ಮೇಲೆ ಅನುಮಾನ ಪಡುತ್ತಿದ್ದಾರೆಂದು ಅವರಿಗೆ ಗೊತ್ತಾಯಿತು.

ರಾಯರು ಅಸ್ವಸ್ಥರಾದರು. ಅವರ ಪಂಚೆಯ ಸೆರಗಿನಲ್ಲಿ ಅವರು ತಂದ ಮೊಹರು ಇತ್ತು. ಅವರ ಮೈ ಬೆವರಿತು, ಗಂಟಲಾರಿತು, ಮನಸ್ಸು ತಳಮಳಗೊಂಡಿತು. ತಮ್ಮದು ಬೀಳುಗಾಲ, ಜನರು ಸಂಶಯಪಡುವುದು ಸಹಜ. ತಾವು ಬಡವರು, ರಾಯರ ಕಣ್ಣುಗಳಲ್ಲಿ ನೀರೂರಿತು.

ಉಳಿಗದವರು ದಿವಾನಖಾನೆಯಲ್ಲಿದ್ದ ವಸ್ತುಗಳನ್ನೆತ್ತಿ ಸಂದುಗೊಂದುಗಳನ್ನು ತಡಕಾಡುತ್ತಿದ್ದರು. ಎಷ್ಟು ಹುಡುಕಿದರೂ ಸಿಗಲಿಲ್ಲ. ಮೂರು ನಾಲ್ಕು ವರ್ಷದ ಮಗು ಮೊಹರು ಕಳೆದುಕೊಂಡು ಅಳುತ್ತಿತ್ತು.

ಮೊದಲಿನಿಂದಲೂ ಮನೆತನದ ಘನತೆ ಗೌರವಗಳನ್ನು ಉಳಿಸಿಕೊಳ್ಳಲು ಹೆಣಗಾಡಿದ ರಾಯರು ಜನರ ಅಪವಾದ ಹೊರಲು ಸಿದ್ಧರಿರಲಿಲ್ಲ. ತಾನಿದ್ದ ದಿವಾನ ಖಾನೆಯಲ್ಲಿಯೇ ಮೊಹರು ಕಳೆದು ಹೋಗಿದೆ. ಆ ದಿವಾನ ಖಾನೆಯಲ್ಲಿ ರಾಯರನ್ನುಳಿದು ಮಿಕ್ಕವರೆಲ್ಲರೂ ಚಿಕ್ಕ ಚಿಕ್ಕ ಮಕ್ಕಳು. ಅಲ್ಲಿ ಸೇರಿದ ಜನ ತನ್ನತ್ತ ಸಂಶಯದಿಂದ ನೋಡುತ್ತಿದ್ದಾರೆ. ಮೊಹರು ಲಪಟಾಯಿಸಿಕೊಂಡು ಹೋದ ಎಂದು ಜನ ಆಡದೆ ಬಿಡುವುದಿಲ್ಲ. ಅದರಿಂದ ಪುರುಷೋತ್ತಮರಾಯರು ತನ್ನಲ್ಲಿಟ್ಟ ನಂಬಿಕೆಗೆ ಧಕ್ಕೆಯಾಗುತ್ತದೆ.

ಅವರ ತಂದೆ ಸಾಯುವ ಮುನ್ನ ಹೇಳಿದ ಮಾತು ನೆನಪಿಗೆ ಬಂತು. ತಂದೆಯ ಮಾತು ಉಳಿಸಲು ಹೋದರೆ ಮನೆತನದ ಮರ್ಯಾದೆ ಮಣ್ಣು ಪಾಲಾಗುತ್ತದೆ. ಮರ್ಯಾದೆ ಕಾಪಾಡಲು ಹೋದರೆ ಮನೆತನದ ಪರಂಪರೆಯನ್ನು ಕಾಯ್ದುಕೊಂಡು ಬಂದ ಲಕ್ಷ್ಮಿಯನ್ನು ಕೈಬಿಡಬೇಕು. ರಾಯರ ಮನಸ್ಸು ಬಿರುಗಾಳಿಗೆ ಸಿಕ್ಕ ತರಗೆಲೆಯಂತಾಯಿತು. ಮೈಗೆ ಬೆಂಕಿ ಬಿದ್ದಂತಾಯಿತು. ಈ ಸಂದಿಗ್ಧ ಸ್ಥಿತಿಯಲ್ಲಿ ಏನು ಮಾಡಬೇಕೆಂಬುದೇ ತೋಚಲಿಲ್ಲ.

ಕಣ್ಣಿನಿಂದ ಹನಿಯುತ್ತಿದ್ದ ಬಿಸಿ ನೀರು ಕಾದ ಕೆಂಡದಂತೆ ತೊಡೆಯ ಮೇಲೆ ಉದುರುತ್ತಿತ್ತು. ಅವರು ತಲೆ ಬಗ್ಗಿಸಿ ಕುಳಿತಿದ್ದರು. ಹುಡುಕಲು ಬಂದವರು, ಮಕ್ಕಳು ಅಲ್ಲಿಂದ ನಿಧಾನವಾಗಿ ಚದುರಿದರು. ರಾಯರು ಅತ್ತಿತ್ತ ನೋಡಿ ತಮ್ಮ ಪಂಚೆಗೆ ಕಟ್ಟಿ ಸೊಂಟಕ್ಕೆ ಸಿಕ್ಕಿಸಿಕೊಂಡ ಮೊಹರು ಬಿಚ್ಚಿ ಮೇಲಿದ್ದ ದೌತಿಯ ತಟ್ಟೆಯಲ್ಲಿಟ್ಟರು. ಭಯಭಕ್ತಿಯಿಂದ ದೇವರನ್ನು ಸ್ಮರಿಸಿ ಕೈ ಮುಗಿದು ನಿಟ್ಟುಸಿರು ಬಿಟ್ಟರು. ಅಲ್ಲಿ ಹೆಚ್ಚು ಹೊತ್ತು ಇರಲು ಮನಸ್ಸು ಬರದೆ ಮನೆಯತ್ತ ಕಾಲು ಹಾಕಿದರು.

★★★

ಪುರುಷೋತ್ತಮರಾಯರು ಮನೆಗೆ ಬಂದಾಗ ಎರಡು ದಿನಗಳ ಹಿಂದೆ ನಡೆದ ಮೊಹರು ಕಳೆದು ಹೋದ ಪ್ರಕರಣ ತಿಳಿಯಿತು. ಆದರೆ ಮೊದಲ ದಿನ ಕಳೆದು ಹೋದ ಮೊಹರು ಮರುದಿನ ಸಿಕ್ಕಿದ್ದರಿಂದ ಆ ಸಮಸ್ಯೆ ಬಗೆ ಹರಿಯಿತು ಎಂದು ಭಾವಿಸಿದರು.